ಕೊಟ್ಟಿಲ್ಲ, ಅವರು ತಮ್ಮ ಆದೇಶವನ್ನು ಉಲ್ಲಂಘನೆ ಮಾಡುವ ಮಟ್ಟಕ್ಕೆ ಹೋಗಿಬಿಟ್ಟಿದ್ದಾರೆ. ದಯವಿಟ್ಟು ಮಾಹಿತಿಯನ್ನು ತರಿಸಲು ಆದೇಶ ಕೊಡುತ್ತೀರಾ.

ಅಧ್ಯಕ್ಷರು.—ಸಂಬಂಧಪಟ ಸಚಿವರು ಬರುತ್ತಾರೆ, ಆದನ್ನು ವಿಚಾರಿಸೋಣ.

ಶ್ರೀ ಎಂ. ಚಂದ್ರಶೇಖರ್.—ಜನಸಾಮಾನ್ಯರಿಗೆ ಉಂಟಾಗಿರತಕ್ಕಂಥ ತೊಂದರೆಯ ಬಗ್ಗೆ ಹೇಳಿದಾಗ ಸರ್ಕಾರದವರು ಅದರ ತೀವ್ರತೆಯನ್ನು ಗಮನಿಸಿ ಉತ್ತರವನ್ನು ಕೊಡಬೇಕು. ಮಾನ್ಯ ಅಧ್ಯಕ್ಷರೂ ಕೂಡ ಸರ್ಕಾರದ ಮೇಲೆ ಒತ್ತಾಯ ತಂದು ಉತ್ತರವನ್ನು ಕೊಡಿಸತಕ್ಕಂಥ ಕೆಲಸ ಮಾಡಬೇಕು. ತಾವು ಸರ್ಕಾರಕ್ಕೆ ಒತ್ತಾಯವನ್ನು ತರದೆ ಇರುವುದಕ್ಕೆ ಏನಂ ಕಾರಣವೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರು ಏನು ಹೇಳುತ್ತಾ ಇದ್ದಾರೆ ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಾ ಇದ್ದೇವೆ. ಸರ್ಕಾರದ ಮುಂದೆ ಯಾವುದೇ ನಿಲುವಳಿ ಸೂಚನೆ ಬಂದರೂ ಆದಕ್ಕೆ ಕೂಡಲೇ ಉತ್ತರವನ್ನು ಕೊಡತಕ್ಕಂಥದ್ದು ಇರುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಸಂಬಂಧಪಟ್ಟ ಇಲಾಖೆಗೆ ಉತ್ತರವನ್ನು ಒದಗಿಸಲು ತಿಳಿಸಿದ್ದೇವೆ.

ಅಧ್ಯಕ್ಷರು.—ಸದಸ್ಯರು ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಬಹಳ ಗಂಭೀರವಾಗಿರುತ್ತದೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ತಕ್ಷಣ ಉತ್ತರಗಳನ್ನು ತರಿಸಿಕೊಂಡು ಕೊಡಬೇಕು. ಪಾರ್ಲಿಮೆಂಟಿನಲ್ಲಿಯೂ ಕೂಡ ಈ ರೀತಿಯಾದ ಒಂದು ಪದ್ಧತಿ ಇರುತ್ತದೆ. ಅದರಂತೆ ಇಲ್ಲಿಯೂ ನಡೆದುಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರು ಏನು ವಿಚಾರವನ್ನು ಕೇಳಬೇಕೆಂದಿರುತ್ತಾರೊ ಅದನ್ನು ಈ ಸದನಕ್ಕೆ ನೋಟೀಸ್ ಮುಖಾಂತರ ಕೊಡಲಿ, ಆವರು ಕೊಡುವಂಥ ವಿಚಾರದ ಬಗ್ಗೆ ಸಂಪೂರ್ಣವಾಗಿ ಗಮನಿಸವನ್ನು ಕೊಡುತ್ತೇನೆಂದು ತಿಳಿಸುತ್ತೇನೆ.

Termination of Services of Lecturers

SRI C. M. ARMUGHAM.— Sir, the Government have issued notice of termination to 200 Lecturers who are working as local candidates. These 200 teachers are working there for the last 5 years. They were continuing with a break of service once in 9 months. Now, after 31st March, they will be terminated. They belong to backward and other minority communities. They are all poor people As has been done in other cases like the doctors, I appeal to the Hon. Minister not to terminate these lecturers but allow them to continue. The Director of Collegiate Education has already served notice. They are all moving about and they may start some demonstration or hunger strike. In order to prevent them from doing such things, I appeal to Sri Shankara Rao, to kindly pass orders to continue their services further.

SRI G. B. SHANKARA RAO.—It is not correct that in the case of medical graduates, because they belong to SCs/STs, Government took a decision to continue their services. In the case of these Lecturers, I would like to say that they have been appointed temporarily ; They have been appointed only on the condition that their services are temporary and they will be terminated after the close of the academic year. They have agreed to work only on that condition Now the Hon Member posed a problem to me. The recruitments have to be